![logo]

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ಯವ/ಕೊಉ/ಪಿಆರ್/03/2021-22

ಸಹಾಯಕಅಭಿಯಂತರರಕಛೇರಿ
ಕೊಡಿಗೇಹಳ್ಳಿ ಉಪವಿಭಾಗ, ಯಲಹಂಕ ವಲಯ
9ನೇ ಅಡ್ಡರಸ್ತೆ, ಡಿ ಬ್ಲಾಕ್
ಸಹಕಾರನಗರ, ಬೆಂಗಳೂರು 560092
ದಿನಾಂಕ: 03.01.2022

**ದಿನಾಂಕ: 03.01.2022 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-**

**ಸಭೆಗೆ ಹಾಜರಿದ್ದವರು:**

- ಶ್ರೀ ಗುರು, ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ ಪ್ರವೀಣ್ಎ.ಆರ್., ಕಿರಿಯ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀಮತಿ. ಕವಿತಾ, ಕಿರಿಯ ಆರೋಗ್ಯ ಪರಿವೀಕ್ಷಕರು, ಘನ ತ್ಯಾಜ್ಯ
- ಶ್ರೀ. ಡಾ॥ ಧಯಾಕರ್, ಆರೋಗ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡಿಗೇಹಳ್ಳಿ.
- ಶ್ರೀಮತಿ. ಚಿಂತನ, ಸಹಾಯಕ ಅಭಿಯಂತರರು (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) (**BWSSB**)
- ಶ್ರೀ ವಿ. ಮಂಜುನಾಥ್,ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ 08.
- ಶ್ರೀ ಎಂ.ಎನ್. ಮುನಿರಾಜು, ಕಿರಿಯ ಅಭಿಯಂತರರು, ಬೆಸ್ಕಾಂ
- ಶ್ರೀ ಜಿ. ವಿಶ್ವನಾಥ್, ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ 08.

**ವಾರ್ಡ್ ಸಮಿತಿ ಸದಸ್ಯರು**

- ಶ್ರೀ ಶ್ರೀಕಾಂತ್, ಆಮ್ಕೋ ಬಡಾವಣೆ, ಸದಸ್ಯರು
- ಶ್ರೀ ಅಂಜನಪ್ಪ, ಬಿ.ಬಿ ನಗರ ಸದಸ್ಯರು
- ಶ್ರೀಮತಿ. ಶಾಂತಕುಮಾರಿ, ಬಾಲಾಜಿ ಬಡಾವಣೆ, ಸದಸ್ಯರು
- ಶ್ರೀ ಕೃಷ್ಣಕುಮಾರ್ ಸಿ, ಡಿಫೆನ್ಸ್ ಕಾಲೋನಿ ಸದಸ್ಯರು
- ಶ್ರೀ ವೀರಣ್ಣ, ಎಲ್.ಕೆ.ಆರ್ ನಗರ, ಸದಸ್ಯರು
- ಶ್ರೀ ವೆಂಕಟಸ್ವಾಮಿ, ದೇವಿನಗರ, ಸದಸ್ಯರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾಯದರ್ಶಿಗಳಾದ ಶ್ರೀ. ಪ್ರವೀಣ್ ಎ.ಆರ್. ರವರು ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಈ ಹಿಂದಿನ ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳನ್ನು ಪರಿಹರಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ನೋಡಲ್ ಅಧಿಕಾರಿರವರು ಮಾತನಾಡುತ್ತ, ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಓದಿ ಚರ್ಚಿಸಿ, ಸಮಸ್ಯೆಗಳನ್ನು ಬಗೆಹರಿಸಿರುವ ಕುರಿತು ಹಾಜರಿದ್ದ ಅಧಿಕಾರಿಗಳಿಗೆ ಮತ್ತು ವಸತಿ ಕ್ಷೇಮಾಭಿವೃಧಿ ಸಂಘದ ಸದಸ್ಯರುಗಳ ಜೊತೆಗೆ ಚರ್ಚಿಸಿದರು.

ಶ್ರೀಮತಿ. ಶಾಂತಕುಮಾರಿ, ಬಾಲಾಜಿ ಬಡಾವಣೆ, ಸದಸ್ಯರು ಮಾತನಾಡಿ ಸದರಿ ಬಡಾವಣೆಯಲ್ಲಿ ಚರಂಡಿಯಲ್ಲಿ ಸಿಲ್ಟ್ ತುಂಬಿರುವುದರಿಂದ ನೀರಿನ ಹರಿವು ಸಾರಾಗವಾಗಿ ಹರಿಯದೆ ಸ್ಥಗಿತವಾಗಿರುತ್ತದೆ. ಸದರಿ ಬಡಾವಣೆಯಲ್ಲಿ ನೀರು ಕಲುಶಿತಗೊಂಡಿರುತ್ತದೆ ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯನ್ನುಂಟು ಮಾಡುತ್ತಿದೆಎಂದು ಸಭೆಯಲ್ಲಿ ಮನವಿ ಮಾಡಿದರು.

ಈ ಕುರಿತು ನೋಡಲ್ ಅಧಿಕಾರಿಗಳು ಮಾತನಾಡಿ ಸಿಲ್ಟ್ ಮತ್ತು ಟ್ರಾಕ್ಟರ್ ಬಿಟ್ಟು ಸಮಸ್ಯೆಯನ್ನು ಬಗೆಹರಿಸಲು ಶ್ರೀ ಪ್ರವೀಣ್ ರವರಿಗೆ ಸೂಚಿಸಿದರು ಮತ್ತು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕಅಭಿಯಂತರರು (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ)ರವರಿಗೆ ಸೂಚಿಸಿದರು. ನಂತರ ಶ್ರೀ ಪ್ರವೀಣ್, ಕಿರಿಯಅಭಿಯಂತರರು ಮಾತನಾಡಿ ಸದರಿ ಸಿಲ್ಟ್ ಮಣ್ಣನ್ನು ತೆಗೆದು ಡಂಪಿಂಗ್ ಯಾರ್ಡ್‌ಗೆ ಸ್ಥಳಾಂತರಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಶ್ರೀ ಅಂಜನಪ್ಪ, ಬಿ.ಬಿ ನಗರ ಸದಸ್ಯರು ಮಾತನಾಡಿ, ವಾರ್ಡ್‌ನಿಲ್ಲೆಡೆ ಕೆ.ಪಿ.ಟಿ.ಸಿ.ಟಲ್ ರವರು ರಸ್ತೆಯನ್ನು ಕೇಬಲ್ ಅಳವಡಿಸಿದ್ದು ರಸ್ತೆಯನ್ನು ಸರಿಪಡಿಸಿರುವುದಿಲ್ಲ ಇದರಿಂದ ವಾಹನ ಸವಾರರಿಗೆ ತೊಂದರೆ ಉಂಟಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಶ್ರೀ ಪ್ರವೀಣ್‌ಎ.ಆರ್, ಕಿರಿಯಅಭಿಯಂತರರುರವರು ಮಾತನಾಡಿ ಬಿಬಿಎಂಪಿಯ ರಸ್ತೆ ಮೂಲಭೂತ ಸೌಕರ್ಯ ಶಾಖೆಯಲ್ಲಿ ಟೆಂಡರ್ ಪ್ರಕ್ರಿಯೆ ನಡೆಯುತ್ತಿದು ಸದರಿಯವರಿಂದ ಸಮಸ್ಯೆಯನ್ನು ಬಗೆಹರಿಸಿಲಾಗುವುದು ಎಂದು ಸಭೆಗೆ ತಿಳಿಸಿದರು.

ಶ್ರೀ ಕೃಷ್ಣಕುಮಾರ್ ಸಿ, ಡಿಫೆನ್ಸ್ ಕಾಲೋನಿ ಸದಸ್ಯರು ಮಾತನಾಡಿ ಸಹಕಾರನಗರದಲ್ಲಿ ರಸ್ತೆಗುಂಡಿಗಳಾಗಿದ್ದು, ಇದರಿಂದ ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿದ್ದು, ರಸ್ತೆಗುಂಡಿಗಳನ್ನು ಮುಚ್ಚಲು ಮನವಿ ಮಾಡಿಕೊಂಡರು.

ಶ್ರೀ ಪ್ರವೀಣ್‌ಎ.ಆರ್., ಕಿರಿಯ ಅಭಿಯಂತರರು ಮಾತನಾಡಿ ರಸ್ತೆ ಶೇಖಡ 80% ರಷ್ಟು ರಸ್ತೆ ಗುಂಡಿಗಳನ್ನು ಮುಚ್ಚಲಾಗಿರುತ್ತದೆ, ಉಳಿಕೆ ರಸ್ತೆ ಗುಂಡಿಗಳನ್ನು ಶೀಘ್ರದಲ್ಲಿ ಮುಚ್ಚಲಾಗುವುದು ಎಂದು ಸಭೆಗೆ ತಿಳಿಸಿದರು.

ಶ್ರೀ ಕೃಷ್ಣಕುಮಾರ್ ಸಿ, ಡಿಫೆನ್ಸ್ ಕಾಲೋನಿ ಸದಸ್ಯರು ಮಾತನಾಡಿ ಸದರಿ ಬಡಾವಣೆಯಲ್ಲಿ ರಸ್ತೆಯಲ್ಲಿ ಖಾಸಗಿ ಸ್ವತ್ತಿನವರು ಅಕ್ರಮವಾಗಿ ಗೇಟ್‌ಗಳನ್ನು ಅಳವಡಿಸಿರುತ್ತಾರೆ ಇದರಿಂದ ಸಾರ್ವಜನಿಕರ ಒಡಾಟಕ್ಕೆ ಸಮಸ್ಯೆ ಉಂಟಾಗಿರುತ್ತದೆಎಂದು ಸಭೆಗೆ ತಿಳಸಿದರು.

ಈ ಕುರಿತು ನೋಡಲ್ ಅಧಿಕಾರಿಗಳು ಮಾತನಾಡಿ ಸದರಿ ಸ್ಥಳವನ್ನು ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸುವಂತೆ ಕಂದಾಯ ಪರೀವಿಕ್ಷಕರಿಗೆ ಸೂಚಿಸಿದರು.

ಶ್ರೀಮತಿ ಶಾಂತಕುಮಾರಿ ಹಾಗೂ ಇತರೆ ಸದಸ್ಯರು ವಾರ್ಡ್ ಸಂಖ್ಯೆ 08 ರಲ್ಲಿ ವೋಟರ್ ಐ.ಡಿ ಅಭಿಯಾನ ಮಾಡುವಂತೆ ಇದರಿಂದ ಹೊಸದಾಗಿ ವಾಸಕ್ಕೆ ಬಂದಿರುವವರಿಗೆ ಅನುಕೂಲವಾಗುತ್ತದೆ. ವಾರ್ಡ್ 08 ರಲ್ಲಿ ಶೇಕಡ 50 ರಷ್ಟು ಜನರು ಬೇರೆ ವಾರ್ಡ್‌ನಲ್ಲಿ ವಾಸವಿರುವುದಾಗಿ ಇದನ್ನು ಪರಿಶೀಲಿಸಲು ಸಭೆಯಲ್ಲಿ ಮನವಿ ಮಾಡಿಕೊಂಡರು.

ಈ ಕುರಿತು ನೋಡಲ್ ಅಧಿಕಾರಿಗಳು ಮಾತನಾಡಿ ಕಂದಾಯ ಪರಿವೀಕ್ಷಕರಿಗೆ ಪರಿಶೀಲಿಸಲು ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮಕೈಗೊಳ್ಳುವಂತೆ ಸೂಚಿಸಿದರು.

ಆರೋಗ್ಯ ಇಲಾಖೆಯ ವೈದ್ಯರಾದ ಡಾ॥ ಧಯಾಕರ್‌ರವರುಕೋವಿಡ್ ಸೋಂಕಿನ ಬಗ್ಗೆ ಮಾತನಾಡಿ ವಾರ್ಡ್ ಮಟ್ಟದಲ್ಲಿ ಚುಚ್ಚುಮದ್ದುಗಳನ್ನು ಲಸಿಕೆಯನ್ನು ನೀಡುತ್ತಿರುವುದನ್ನು ಬಳಸಿಕೊಳ್ಳಲು ಮನವಿ ಮಾಡಿದರು ಹಾಗೂ ಇದರ ಬಗ್ಗೆ ಎಚ್ಚರವಹಿಸಲು ಅಧಿಕಾರಿಗಳು ಸಮಿತಿ ಸದಸ್ಯರಿಗೆ ಮನದಟ್ಟು ಮಾಡಿರುತ್ತಾರೆ.

ಅಂತಿಮವಾಗಿ ನೋಡಲ್‌ಅಧಿಕಾರಿಯವರು ಈ ಮೇಲ್ಕಂಡ ಅಂಶಗಳ ಬಗ್ಗೆ ವಿವರವಾಗಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಹಾಗೂ ಈ ಸಭೆಗೆಗೈರು ಹಾಜರಿದ್ದವರಿಗೆಕಾರಣ ಕೇಳಿ ನೋಟೀಸ್‌ಗಳನ್ನು ಜಾರಿ ಮಾಡಲು ಸೂಚಿಸಿದರು.ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿದರು ನಂತರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಮತ್ತು
ಕಿರಿಯ ಅಭಿಯಂತರರು
ವಾರ್ಡ್ 8, ಕೊಡಿಗೇಹಳ್ಳಿ ಉಪ ವಿಭಾಗ

ನೋಡಲ್‌ಅಧಿಕಾರಿ ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ:08

<u>ಪ್ರತಿಯನ್ನು</u>:-

1. ಮಾನ್ಯ ಆಡಳಿತ ಅಧಿಕಾರಿಗಳು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯಮುಖ್ಯಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯಅಪರಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿಸಲ್ಲಿಸಿದೆ.
5. ವಲಯ ಅರಣ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಗೆ ಹಾಜರಾಗಲುತಿಳಿಸಿದೆ.
6. ಸಹಾಯಕಕಾರ್ಯಪಾಲಕಅಭಿಯಂತರರು, ಬೃಹತ್ ನೀರುಗಾಲುವೆರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕಕಾರ್ಯಪಾಲಕಅಭಿಯಂತರರು, ಬೆಸ್ಕಾಂ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಸಹಾಯಕಕಾರ್ಯಪಾಲಕಅಭಿಯಂತರರು, ಕೊಡಿಗೇಹಳ್ಳಿ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಕಳುಹಿಸಿದೆ.